# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂಎಸ್/1274/2017ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 8.9.2020.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ:.ಶ್ರೀ ಕಾಳಿಕಾಂಭ ವಿಶ್ವಕರ್ಮ ಕುಶಲ ಕೈಗಾರಿಕ ಸಹಕಾರ ಸಂಘದ ಒತ್ತುವರಿ ಜಾಗವನ್ನು ಬಿಡಿಸಿಕೊಡಲು ಹಾಗೂ ದುರಸ್ತಿ ಮಾಡಿಸಿಕೊಡಲು ಕ್ರಮ ಕೈಗೊಳ್ಳುವ ಕುರಿತು,

*****

1. ದೂರುದಾರರಾದ ಶ್ರೀ ಕೆ.ಬಿ.ಶ್ರೀಕಂಠಯ್ಯ, ನಂ. 562, ಅಧ್ಯಕ್ಷರು, ಶ್ರೀ ಕಾಳಿಕಾಂಭ ವಿಶ್ವಕರ್ಮ ಕುಶಲ ಕೈಗಾರಿಕಾ ಸಹಕಾರ ಸಂಘ, ಹೆಬ್ಬಾಲೆ ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ಮತ್ತು ಶ್ರೀ ಹೆಚ್.ವಿ.ರಾಜಾಚಾರ್, ನಂ. 562, ಉಪಾಧ್ಯಕ್ಷರು, ಶ್ರೀ ಕಾಳಿಕಾಂಭ ವಿಶ್ವಕರ್ಮ ಕುಶಲ ಕೈಗಾರಿಕಾ ಸಹಕಾರ ಸಂಘ, ಹೆಬ್ಬಾಲೆ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ರವರು (1) ಶ್ರೀ ಕೃಷ್ಣ, ತಹಶೀಲ್ದಾರ್, ತಾಲ್ಲೂಕು ಕಛೇರಿ, ಸೋಮವಾರಪೇಟೆ ತಾಲ್ಲೂಕು, (2) ವಿಷಯ ನಿರ್ವಾಹಕರು, ತಾಲ್ಲೂಕು ಕಛೇರಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ, (3) ಶ್ರೀ ನಂದಕುಮಾರ್, ರಾಜಸ್ವ ನಿರೀಕ್ಷಕರು, ಕಂದಾಯ ಇಲಾಖೆ, ಕುಶಾಲನಗರ ಹೋಬಳಿ ಮತ್ತು, (4) ಶ್ರೀ ರಾಕೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಹೆಬ್ಬಾಲೆ, ಕುಶಾಲನಗರ ಹೋಬಳಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ರವರುಗಳ ವಿರುದ್ಧ ಆಪಾದಿಸಿ ಈ ಕಛೇರಿಗೆ ದೂರು ಸಲ್ಲಿಸಿದ್ದು, ತನಿಖೆಯಲ್ಲಿ (5)ಶ್ರೀ ಪಿ.ಎಸ್.ಮಹೇಶ್, ತಹಶೀಲ್ದಾರ್, ಸೋಮವಾರಪೇಟೆ ರವರನ್ನು 5ನೇ ಎದುರುದಾರರನ್ನಾಗಿ ಸೇರಿಸಿ ತನಿಖೆ ಕೈಗೊಳ್ಳಲಾಗಿರುತ್ತದೆ (ಇನ್ನು ಮುಂದೆ ಕ್ರಮವಾಗಿ '1 ರಿಂದ 5ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ).

2. ದೂರಿನ ಸಂಕ್ಷಿಪ್ತ ಸಾರಾಂಶ:

ಶ್ರೀ ಕಾಳಿಕಾಂಭ ವಿಶ್ವಕರ್ಮ ಕುಶಲ ಕೈಗಾರಿಕಾ ಸಹಕಾರ ಸಂಘ ನಿ., ಹೆಬ್ಬಾಲೆ ಗ್ರಾಮ ಈ ಸಂಘದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸಂಘದ ವತಿಯಿಂದ ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಸಂಘವು 1965ರಲ್ಲಿ ಪ್ರಾರಂಭಗೊಂಡಿರುತ್ತದೆ. ಹೆಬ್ಬಾಲೆ ಗ್ರಾಮದ ಸರ್ವೆ ನಂ. 17/12ರ 2.00 ಎಕರೆ ಜಾಗವನ್ನು ಕಿಮ್ಮತ್ತು ಕಟ್ಟಿಸಿಕೊಂಡು

1990-91ರಲ್ಲಿ ಮಂಜೂರು ಮಾಡಿಕೊಟ್ಟಿರುತ್ತಾರೆ. ಜಾಗದ ಮಂಜೂರಾತಿ ಆದೇಶ, ಸಾಗುವಳಿ ಚೀಟಿ, ಪಹಣಿ, ಜಮಾಬಂಧಿ ಹಕ್ಕು ಬದಲಾವಣೆ ವಹಿ, ಸರ್ವೆ ಸ್ಕೆಚ್ ದಾಖಲಾತಿಗಳನ್ನು ಸಂಘವು ಪಡೆದುಕೊಂಡು ಎತ್ತಿನಗಾಡಿಗಳ ತಯಾರಿಕೆಯನ್ನು ಮಾಡುತ್ತಾ ಬಂದಿರುತ್ತದೆ. ಬೇಡಿಕೆಯು ಕಡಿಮೆಯಾದಾಗ ಸಂಘದ ಕಾರ್ಯಚಟುವಟಿಕೆಗಳು ಕಡಿಮೆಯಾಗುತ್ತಾ ಬರುತ್ತದೆ. ಈ ಸಂದರ್ಭದಲ್ಲಿ ಸಂಘದ ಜಾಗವನ್ನು ಕೆಲವರು ಒತ್ತುವರಿ ಮಾಡಿಕೊಂಡು ಸಂಘಕ್ಕೆ ತೊಂದರೆ ಕೊಟ್ಟಿದ್ದು ದಿನಾಂಕ: 05/05/1994ರಲ್ಲಿ ಸಂಘದ ಒತ್ತುವರಿ ಜಾಗವನ್ನು ತೆರವುಗೊಳಿಸುವಂತೆ ತೀರ್ಪು ನೀಡಿ ತಹಶೀಲ್ದಾರ್ ಆದೇಶವನ್ನು ಹೊರಡಿಸಿರುತ್ತಾರೆ. ಸದರಿ ಆದೇಶವನ್ನು ಪ್ರಶ್ನಿಸಿ ಒತ್ತುವರಿದಾರರು ಉಪ ವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ವಿಚಾರಣೆ ನಡೆಸಿ ದಿನಾಂಕ: 03/01/1997 ರಂದು ತಹಶೀಲ್ದಾರ್, ಸೋಮವಾರಪೇಟೆ ರವರಿಗೆ ಕಳುಹಿಸಿಕೊಟ್ಟಿರುತ್ತಾರೆ. ಈ ಬಗ್ಗೆ ಏನೂ ಕ್ರಮ ಕೈಗೊಳ್ಳದೆ ಕಡತವನ್ನು ಕಾಣದಂತೆ ಮಾಡಿರುತ್ತಾರೆ. ಒತ್ತುವರಿದಾರರ ಹಿತ ಕಾಪಾಡಲು ಕಡತವನ್ನು ಅಡಗಿಸಿಟ್ಟಿದ್ದು ಜಾಗದ ದುರಸ್ತಿ ಮಾಡದೆ ಒತ್ತುವರಿಯನ್ನು ಬಿಡಿಸಿಕೊಡದೆ ಒತ್ತುವರಿದಾರರು ಜಾಗವನ್ನು ಬಿಡದೆ ಅತಿಕ್ರಮಣದಿಂದ ಮನೆ ಕಟ್ಟಿಕೊಳ್ಳಲು ಅನುವು ಮಾಡಿಕೊಟ್ಟಿರುತ್ತಾರೆ.

ಪುನ: 28/10/2014 ರಂದು ದುರಸ್ತಿ ಮಾಡಿಕೊಡಲು ತಹಶೀಲ್ದಾರ್ ರವರಿಗೆ ಪತ್ರ ಬರೆದಿದ್ದು ತಹಶೀಲ್ದಾರ್ ರವರು ಜಾಗದ ದುರಸ್ತಿಗಾಗಿ ಕಡತವನ್ನು ಅಭಿಲೇಖಾಲಯದಲ್ಲಿ ಹುಡುಕಿಸಿದ್ದು ಜಾಗದ ಮಂಜೂರಾತಿಯ ಮೂಲ ಕಡತ ದೊರಕಿರುವುದಿಲ್ಲ. ಆದರೆ ಸದರಿ ಜಾಗಕ್ಕೆ ಸಂಬಂಧಿಸಿದ ರದ್ದು ಮಾಡಲ್ಪಟ್ಟ ಹಳೆಯ ಮಂಜೂರಾತಿ ಕಡತ ಮಾತ್ರ ಇಟ್ಟಿದ್ದು ಜಾಗವು ರದ್ದಾಗಿದೆ ಎಂದು ವಿಷಯ ನಿರ್ವಾಹಕರು ತಿಳಿಸಿರುತ್ತಾರೆ. ಶ್ರೀ ಎ.ಎಸ್.ಪರಮೇಶ್ ರವರು ದಿನಾಂಕ: 22/06/2015 ರಂದು ಮನೆ ಕಟ್ಟಲು ಪ್ರಾರಂಭಿಸಿರುತ್ತಾರೆ. ದಿನಾಂಕ: 22/06/2016 ರಂದು ತಹಶೀಲ್ದಾರ್ ರವರ ಆದೇಶದ ಮೇಲೆ ತಾಲ್ಲೂಕು ಸರ್ವೆಯರ್ ಜಾಗವನ್ನು ಸರ್ವೆ ಮಾಡಿ ಒತ್ತುವರಿ ಮಾಡಿದ ಸರ್ವೆ ಸ್ಕೆಚ್ ನೀಡಿದ್ದಾರೆ. ಸಂಘವು 1993 ರಿಂದ ದುರಸ್ತಿಗಾಗಿ ಹಾಗೂ ಒತ್ತುವರಿ ತೆರವಿಗಾಗಿ ಹೋರಾಟ ಮಾಡುತ್ತಲೇ ಬಂದಿರುತ್ತದೆ. ಸಂಘದ ಒತ್ತುವರಿ ಜಾಗವನ್ನು ಬಿಡಿಸಿಕೊಡಲು ಹಾಗೂ ದುರಸ್ತಿ ಮಾಡಿಸಿಕೊಡಲು ತಮ್ಮಲ್ಲಿ ಪ್ರಾರ್ಥಿಸುತ್ತೇವೆ ಎಂದು ನಮೂದಿಸಿರುತ್ತಾರೆ.

3. 1ನೇ ಎದುರುದಾರರ ಆಕ್ಷೇಪಣೆ:-

ಕುಶಾಲನಗರ ಹೋಬಳಿ, ಹೆಬ್ಬಾಲೆ ಗ್ರಾಮದ ಸರ್ವೆ ನಂ. 17/12ರ 2 ಎಕರೆ ಜಾಗವು 22/08/1991 ರಲ್ಲಿ ಪಿರ್ಯಾದುದಾರರ ಸಂಘಕ್ಕೆ ಮಂಜೂರಾಗಿರುತ್ತದೆ. ಸದರಿ ಕಡತದ ಮೂಲ ಪ್ರತಿಯು ಲಭ್ಯವಿಲ್ಲದ ಕಾರಣ ದುರಸ್ತಿಯಾಗಿರುವುದಿಲ್ಲ. ಸರ್ಕಾರದ ಇತ್ತೀಚಿನ ನಿರ್ದೇಶನದಂತೆ ಮೂಲ ಕಡತ ಲಭ್ಯವಿಲ್ಲದಿದ್ದಲ್ಲಿ ಗೈರುವಿಲೆ ಕಡತ ತಯಾರಿಸಿ ಅಗತ್ಯ ದಾಖಲಾತಿಗಳೊಂದಿಗೆ ದುರಸ್ತಿ ಮಾಡಲು ಆದೇಶವಾಗಿರುತ್ತದೆ. ನಮೂನೆ 1-5 ನ್ನು ಭರ್ತಿ ಮಾಡಿ ಗೈರುವಿಲೆ ಕಡತ ತಯಾರಿಸಿ ದುರಸ್ತಿಗೆ ಪ್ರಸ್ತಾವನೆಯೊಂದಿಗೆ ಈ ಕಛೇರಿಗೆ ಕಳುಹಿಸಿಕೊಡಲು ಕುಶಾಲನಗರ ಕಂದಾಯ ಪರಿವೀಕ್ಷಕರಿಗೆ ಸೂಚಿಸಲಾಗಿರುತ್ತದೆ. ಅದರಂತೆ ನಮೂನೆ 1-5ನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ದಿನಾಂಕ: 31/12/2015 ರಂದು ಕಂದಾಯ ಪರಿವೀಕ್ಷಕರು ತಾಲ್ಲೂಕು ಕಛೇರಿಗೆ ಸಲ್ಲಿಸಿರುತ್ತಾರೆ.

ನಂತರ ಸದರಿ ಕಡತವನ್ನು ಸರ್ವೆ ಶಾಖೆಗೆ ಕಳುಹಿಸಿದ್ದು, ಮೋಜಣಿದಾರರು ಸರ್ವೆ ಮಾಡಿ ಮಂಜೂರಾದ ಹೆಬ್ಬಾಲೆ ಗ್ರಾಮದ ಸರ್ವೆ ನಂ. 17/12ರ 2.00 ಎಕರೆ ಪೈಕಿ 1.00 ಎಕರೆ ಜಾಗವನ್ನು 20 ಜನ ಹಲವು ವರ್ಷಗಳ ಹಿಂದೆ ಒತ್ತುವರಿ ಮಾಡಿ ಮನೆ ಕಟ್ಟಿರುವುದಾಗಿ ನಕಾಶೆಯೊಂದಿಗೆ ವರದಿ ಮಾಡಿರುತ್ತಾರೆ. ಪರಿಶೀಲಿಸಲಾಗಿ ಸದರಿ ಒತ್ತುವರಿದಾರರಿಗೆ ಜಮೀನು ಮಂಜೂರಾಗಿದ್ದು, ಪಹಣಿಯಲ್ಲಿ ದಾಖಲೆ ಇರುವುದರಿಂದ ಸದರಿ ಜಮೀನು ಖಾಸಗಿ ಜಮೀನಿನ ವ್ಯಾಪ್ತಿಗೆ ಒಳಪಡುತ್ತದೆ. ಖಾಲಿ ಇರುವ 1.00 ಎಕರೆ ಜಾಗವನ್ನು ದುರಸ್ತಿಪಡಿಸಲು ಅವಕಾಶವಿರುತ್ತದೆ ಎಂದು ನಮೂದಿಸಿರುತ್ತಾರೆ.

4. 2ನೇ ಮತ್ತು 3ನೇ ಎದುರುದಾರರು ಈ ಕಛೇರಿಯಿಂದ ಕಳುಹಿಸಲಾದ ಪತ್ರವನ್ನು ಸ್ವೀಕರಿಸಿದ್ದರೂ ಸಹಾ, ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ.

5. 4ನೇ ಎದುರುದಾರರ ಆಕ್ಷೇಪಣೆಗಳು:

ದಿನಾಂಕ: 01/07/2015 ರಂದು ಹೆಬ್ಬಾಲೆ ಗ್ರಾಮ ಪಂಚಾಯತಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತೇನೆ. ದಿನಾಂಕ: 03/07/2015 ರಂದು ಪಿರ್ಯಾದುದಾರರು ಗ್ರಾಮ ಪಂಚಾಯತಿಗೆ ಅರ್ಜಿ ನೀಡಿದ್ದು ಶ್ರೀ ಎ.ಎಸ್.ಪರಮೇಶ್ ರವರ ಮನೆಯ ಸ್ಥಳ ಪರಿಶೀಲನೆ ಮಾಡುವ ಸಂದರ್ಭದಲ್ಲಿ ಮನೆಯು ಛಾವಣಿ ಹಂತದಲ್ಲಿರುತ್ತದೆ. ಆದ್ದರಿಂದ ಪರಮೇಶ್ ರವರಿಗೆ ನೋಟಿಸ್ ಜಾರಿ ಮಾಡಲಾಗಿ ಸಂಬಂಧಪಟ್ಟವರು ಸರ್ವೆ ಮಾಡಿಕೊಂಡು ಗಡಿ

ಗುರುತು ಮಾಡಿದಲ್ಲಿ ಜಾಗವನ್ನು ಬಿಟ್ಟು ಕೊಡುವುದಾಗಿ ತಿಳಿಸಿರುತ್ತಾರೆ. ಒತ್ತುವರಿ ತೆರವು ಪ್ರಾಧಿಕಾರವು ತಹಶೀಲ್ದಾರ್ ರವರು ಆಗಿರುತ್ತಾರೆ ಎಂದು ನಮೂದಿಸಿರುತ್ತಾರೆ.

6. ಪಿರ್ಯಾದುದಾರರ ಪ್ರತ್ಯುತ್ತರ:

"ಜಿಲ್ಲಾಧಿಕಾರಿಯವರ ಆದೇಶ ದಿ: 15.07.1991 ರ ಮೇರೆಗೆ ಸರ್ವೆ ನಂ. 17/12 ದಾಖಲಿಸಿ 2.00 ಎಕ್ರೆ ಜಾಗವನ್ನು ಮಂಜೂರು ಮಾಡಿರುತ್ತಾರೆ. ಸದರಿ ಜಾಗದ ಕಿಮ್ಮತ್ತು ಅಪ್‌ಸೆಟ್ ಪ್ರೈಸ್ ರೂ.1000/- ಸರ್ವೆ ಶುಲ್ಕ ರೂ.35/- ಪೋಡಿ ಶುಲ್ಕ ರೂ.20/- ಗಳನ್ನು ಚಲನ್ ಸಂಖ್ಯೆ: 1/14-8-91 ರಂದು ಸರ್ಕಾರಕ್ಕೆ ಸಂದಾಯ ಮಾಡಲಾಗಿದೆ. ಅಧಿಕಾರಿಗಳು ಇದುವರೆವಿಗೂ ಯಾವುದೇ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ಧೋರಣೆ ತೋರಿಸಿದರಿಂದಾಗಿ ಒತ್ತುವರಿದಾರರು ಅತಿಕ್ರಮದಿಂದ ಮನೆ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಟ್ಟಂತಾಗಿದೆ. ವಿಶ್ವಕರ್ಮ ಸಂಘದ ಜಾಗದಲ್ಲಿ ಮಾಡಿದ ಒತ್ತುವರಿಯನ್ನು ತೆರವುಗೊಳಿಸಲು ಮತ್ತು 2.00 ಎಕ್ರೆ ಜಾಗದ ವಿಷಯವಾಗಿ ನ್ಯಾಯದೊರಕಿಸಿಕೊಡಲು" ಕೋರಿರುತ್ತಾರೆ.

7. 4ನೇ ಎದುರುದಾರರು ದಿನಾಂಕ: 02/07/2018ರಲ್ಲಿ ಸಲ್ಲಿಸಿದ ವರದಿ:

ಹೆಬ್ಬಾಲೆ ಗ್ರಾಮದ ಸರ್ವೆ ನಂ. 17/12ಪಿ99ರ ಜಾಗಕ್ಕೆ ತೆರಳಿ ಪರಿಶೀಲಿಸಿದಾಗ ಮೂಲ ಸರ್ವೆ ನಂ. 17 ಆಗಿದ್ದು ಸರ್ವೆ ನಂ. 17/12ಪಿ99ರ ಜಾಗದಲ್ಲಿ ಒಟ್ಟು 20 ಬಡ ಕುಟುಂಬಗಳು ಸುಮಾರು 20 ವರ್ಷಗಳ ಹಿಂದೆಯೇ ಒತ್ತುವರಿ ಮಾಡಿಕೊಂಡಿದ್ದು, ಅಲ್ಲದೇ ಕುಡಿಯುವ ನೀರಿನ ಉದ್ದೇಶಕ್ಕೆ ಸರ್ಕಾರದಿಂದ ಎರಡು ನೀರಿನ ಟ್ಯಾಂಕ್ ನಿರ್ಮಿಸಲಾಗಿದೆ. ಒತ್ತುವರಿ ಮಾಡಿಕೊಂಡಿರುವ ಎಲ್ಲಾ ಕುಟುಂಬಗಳಿಗೂ ಕಂದಾಯ ಇಲಾಖೆಯು ಮನೆಯ ಸ್ಥಳದ ಜಾಗವನ್ನು ಸಕ್ರಮೀಕರಣಗೊಳಿಸಿ, ಹಕ್ಕು ಪತ್ರ ಮತ್ತು ಸಾಗುವಳಿ ಚೀಟಿ ನೀಡಿದ್ದು, ಸದರಿ ಫಲಾನುಭವಿಗಳು ಸುಮಾರು 30 ವರ್ಷಗಳ ಹಿಂದಿನಿಂದ ನಲ್ಲಿ ನೀರಿನ ಸಂಪರ್ಕ ಪಡೆದು ಮನೆ ಕಂದಾಯ ಪಾವತಿ ಮಾಡಿಕೊಂಡು ಬರುತ್ತಿರುವುದಾಗಿದೆ. ಒತ್ತುವರಿದಾರರಿಗೆ ಸರ್ಕಾರದಿಂದ ನೀಡಲಾಗಿರುವ ಹಕ್ಕುಪತ್ರ ಮತ್ತು ಇತರೇ ದಾಖಲಾತಿಗಳನ್ನು ಸಲ್ಲಿಸಲಾಗಿದೆ ಎಂದು ನಮೂದಿಸಿರುತ್ತಾರೆ.

8. 5ನೇ ಎದುರುದಾರರ ವರದಿ ದಿನಾಂಕ: 25/07/2018:

ಶ್ರೀ ಕಾಳಿಕಾಂಬ ವಿಶ್ವಕರ್ಮ ಕುಶಲ ಕೈಗಾರಿಕಾ ಸಹಕಾರ ಸಂಘ, ಕುಶಾಲನಗರ ಹೋಬಳಿ, ಹೆಬ್ಬಾಲೆ ಗ್ರಾಮ ಇವರಿಗೆ ದಿನಾಂಕ: 15/07/1991 ರಂದು ಎರಡು ಎಕರೆ

ಜಮೀನು ಮಂಜೂರು ಮಾಡಿರುತ್ತಾರೆ. "ಮಂಜೂರಾತಿದಾರರು ಮಂಜೂರು ಮಾಡಿರುವ ಜಾಗವನ್ನು ಕುಶಲ ಕರ್ಮಿಗಳ ಕೈಗಾರಿಕಾ ಕಟ್ಟಡಕ್ಕಾಗಿ ಮಾತ್ರ ವಿನಿಯೋಗಿಸುವಂತೆ ಆದೇಶಿಸಿ ಸದರಿ ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಮಾತ್ರ ವಿನಿಯೋಗಿಸುವಂತೆ ಹಾಗೂ ಮಂಜೂರು ಮಾಡಿದ ಜಾಗವನ್ನು ಮಂಜೂರು ಮಾಡಿದ ಉದ್ದೇಶಕ್ಕಾಗಿ ಹೊರತು ಇತರೆ ಉದ್ದೇಶಕ್ಕೆ ವಿನಿಯೋಗಿಸುವುದನ್ನು ನಿಷೇಧಿಸಿರುತ್ತಾರೆ. ಹಾಗೇನಾದರೂ ಇತರೆ ಉದ್ದೇಶಗಳಿಗೆ ವಿನಿಯೋಗಿಸಿದ ಪಕ್ಷದಲ್ಲಿ ಮಂಜೂರು ಮಾಡಿದ ಜಾಗವನ್ನು ಕಂದಾಯ ಇಲಾಖೆಯ ವಶಕ್ಕೆ ಹಿಂತೆಗೆದುಕೊಳ್ಳಲಾಗುವುದು" ಎಂಬ ಷರತ್ತನ್ನು ವಿಧಿಸಿ ಮಂಜೂರಾತಿ ಮಾಡಲಾಗಿರುತ್ತದೆ. ಸದರಿ ಸಂಘದವರು ಮಂಜೂರಾದ 2.10 ಎಕರೆಯನ್ನು ವಿನಿಯೋಗಿಸಿಕೊಳ್ಳದೇ ಸದರಿ ಜಾಗದಲ್ಲಿ ಸಂಘದ 1 ಹಳೆಯ ಕಟ್ಟಡವನ್ನು ಕಟ್ಟಿಕೊಂಡಿರುತ್ತಾರೆ. 1969ರ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳ ನಿಯಮ 9(3)(i) ರಂತೆ ಸ್ವಾಧೀನ ತೆಗೆದುಕೊಂಡ ದಿನಾಂಕದಿಂದ 2 ವರ್ಷದೊಳಗಾಗಿ ಮಂಜೂರಾದ ಉದ್ದೇಶಕ್ಕೆ ಬಳಸಿಕೊಳ್ಳತಕ್ಕದ್ದು ಎಂದಿದ್ದು, ಸದರಿ ಜಮೀನಿನಲ್ಲಿ ಸಂಘದ 1 ಹಳೆಯ ಕಟ್ಟಡವನ್ನು ಹೊರತುಪಡಿಸಿ ಉಳಿದ ಜಾಗವನ್ನು ಸದರಿ ಸಂಘದವರು ಸ್ವಾಧೀನ ತೆಗೆದುಕೊಂಡಿರುವುದಿಲ್ಲವಾದ್ದರಿಂದ, ಸದರಿ ಸಂಘದವರು ಭೂ ಮಂಜೂರಾತಿ ನಿಯಮಾವಳಿಗಳನ್ನು ಉಲ್ಲಂಘಿಸಿರುತ್ತಾರೆ.

ಹೆಬ್ಬಾಲೆ ಗ್ರಾಮದ ಸರ್ವೆ ನಂ. 17/26ರ 2.00 ಎಕರೆ ಪೈಕಿ 1.00 ಎಕರೆ ಜಮೀನಿಗೆ ಹಕ್ಕು ಪತ್ರ ಪಡೆದಿದ್ದು ಶ್ರೀ ಕಾಳಿಕಾಂಬ ವಿಶ್ವಕರ್ಮ ಸಂಘದವರಿಗೆ ಮಂಜೂರಾದ ಜಮೀನನ್ನು ದುರಸ್ತಿ ಮಾಡಲು ಕೇವಲ 1.00 ಎಕರೆ ಬಾಕಿಯಿರುತ್ತದೆ. ಶ್ರೀ ಕಾಳಿಕಾಂಬ ವಿಶ್ವಕರ್ಮ ಸಂಘದವರಿಗೆ ಮಂಜೂರಾದ 2.10 ಎಕರೆ ಜಮೀನು ಮಂಜೂರಾತಿಯನ್ನು ವಜಾಗೊಳಿಸಿ, ಕುಶಾಲನಗರ ಹೋಬಳಿ, ಹೆಬ್ಬಾಲೆ ಗ್ರಾಮದ ಸರ್ವೆ ನಂ. 17/26ರ 1.00 ಎಕರೆ ತಿದ್ದುಪಡಿ ಆದೇಶವಾದ ನಂತರ ದುರಸ್ಥಿಗೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ. 2.10 ಎಕರೆ ಮಂಜೂರಾತಿಯನ್ನು ವಜಾಗೊಳಿಸಿ ಹೆಬ್ಬಾಲೆ ಗ್ರಾಮದ ಸರ್ವೆ ನಂ. 17/26ರ 1.00 ಎಕರೆ ತಿದ್ದುಪಡಿ ಆದೇಶ ಮಾಡಿಕೊಡಬೇಕಾಗಿ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ತಿದ್ದುಪಡಿ ಆದೇಶವಾದ ನಂತರ ದುರಸ್ಥಿಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ನಮೂದಿಸಿರುತ್ತಾರೆ.

9. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ.

10. ಸೋಮವಾರಪೇಟೆ ತಾಲ್ಲೂಕು ಕುಶಾಲನಗರ ಹೋಬಳಿ ಹೆಬ್ಬಾಲೆ ಗ್ರಾಮದ ಸರ್ವೆ ನಂ. 17/12 ರ 2 ಎಕರೆ ಜಾಗವನ್ನು ಶ್ರೀ ಕಾಳಿಕಾಂಬ ವಿಶ್ವಕರ್ಮ ಕುಶಲ ಕೈಗಾರಿಕಾ ಸಹಕಾರಿ ಸಂಘದ ಕಟ್ಟಡ ಕಟ್ಟುವ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಗಳು ದಿನಾಂಕ: 15/07/1991 ರಂದು ಮಂಜೂರು ಮಾಡಿ ಆದೇಶಿಸಿರುತ್ತಾರೆ. ಜಾಗದ ಬೆಲೆ ಎಕರೆ ಒಂದಕ್ಕೆ 1000/- ವಿಧಿಸಿ ಶೇಕಡ 50 ರಷ್ಟನ್ನು ಸರ್ಕಾರಕ್ಕೆ ಪಾವತಿಸುವ ಷರತ್ತಿನ ಮೇಲೆ ಮಂಜೂರುಮಾಡಿರುತ್ತಾರೆ. ಸಂಘದ ವತಿಯಿಂದ ಅದರಂತೆ 1000/- ರೂಗಳನ್ನು ಸರ್ಕಾರಕ್ಕೆ ಪಾವತಿ ಮಾಡಿದ ನಂತರ ತಹಶೀಲ್ದಾರರು ಸಂಘದವರ ಹೆಸರಿನಲ್ಲಿ ಸಾಗುವಳಿಚೀಟಿ ನೀಡುವಂತೆ ಆದೇಶಿಸಿರುತ್ತಾರೆ. ಸಂಘದ ಕಟ್ಟಡ ಕಟ್ಟುವ ಉದ್ದೇಶಕ್ಕೆ ಮಾತ್ರ ವಿನಿಯೋಗಿಸಬೇಕೆಂದು ಇತರೆ ಉದ್ದೇಶಕ್ಕೆ ಬಳಸಿದಲ್ಲಿ ಜಾಗವನ್ನು ಕಂದಾಯ ಇಲಾಖೆಯ ವಶಕ್ಕೆ ಹಿಂದೆ ತೆಗೆದುಕೊಳ್ಳಲಾಗುವುದು ಎಂದು ಆದೇಶಿಸಿರುತ್ತಾರೆ. ಜಾಗದ ಕಿಮ್ಮತ್ತನ್ನು ಚಲನ್ ಸಂಖ್ಯೆ: 1/14-8-91 ರೀತ್ಯಾ ಸಂಘದವರು ಪಾವತಿಸಿದ್ದು ಜಮೀನಿನ ಅನುಭವವನ್ನು ಸಂಘಕ್ಕೆ ನೀಡಿ ತಹಶೀಲ್ದಾರರು 22/08/1991 ರಂದು ಸಾಗುವಳಿ ಚೀಟಿ ನೀಡಿ ಅನುಮತಿಸಿರುತ್ತಾರೆ. ದಿನಾಂಕ: 22/10/1991 ರ ಆದೇಶದಂತೆ ಎಂ.ಸಿ/ನಂ/08/91-92 ಅಡಿ ಖಾತೆ ಮಾಡಲಾಗಿರುತ್ತದೆ.

11. 1969 ರ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳ ನಿಯಮ 9(3)(i) ರಂತೆ ಸ್ವಾಧೀನ ತೆಗೆದುಕೊಂಡ ದಿನಾಂಕದಿಂದ 2 ವರ್ಷದ ಒಳಗಾಗಿ ಮಂಜೂರಾದ ಉದ್ದೇಶಕ್ಕೆ ಬಳಸಿಕೊಳ್ಳತಕ್ಕದ್ದು ಎಂದು ನಿಯಮವಿರುವುದಾಗಿ 5ನೇ ಎದುರುದಾರರು ವರದಿ ಸಲ್ಲಿಸಿರುತ್ತಾರೆ. ಮಂಜೂರಾತಿ ಆದೇಶದಲ್ಲಿ ನಿಯಮ 9 ರ ಷರತ್ತನ್ನು ವಿಧಿಸಿರುವುದು ಕಂಡುಬಂದಿರುತ್ತದೆ.

12. ಸಂಘದ ಕಟ್ಟಡ ನಿರ್ಮಿಸಲು 2 ಎಕರೆ ಸ್ಥಳವನ್ನು ಮಂಜೂರು ಮಾಡಿದ್ದು ಪೂರ್ತಿ ಜಮೀನಿನಲ್ಲಿ ಕಟ್ಟಡ ಕಟ್ಟದೆ 1 ಎಕರೆ ಖಾಲಿ ಜಾಗವನ್ನು ಸಂಘದವರು ಬಿಟ್ಟಿರುತ್ತಾರೆ. ಹಲವು ವರ್ಷಗಳ ಹಿಂದೆ ಸುಮಾರು 20 ಜನ ಸದರಿ ಜಮೀನಿನ 1 ಎಕರೆ ಸ್ಥಳದಲ್ಲಿ ಅಕ್ರಮವಾಗಿ ಹಲವು ಮನೆಗಳನ್ನು ಕಟ್ಟಿ ಸ್ವಾಧೀನ ಹೊಂದಿದ್ದು ಸೋಮವಾರಪೇಟೆ ತಹಶಿಲ್ದಾರರು ಸದರಿ ಮನೆಗಳ ಸ್ಥಳವನ್ನು ಸಕ್ರಮೀಕರಣಗೊಳಿಸಿ ಹಕ್ಕು ಪತ್ರವನ್ನು 20 ಜನರಿಗೆ ನೀಡಿರುವುದು ಕಂಡುಬಂದಿರುತ್ತದೆ.

13. ಪಿರ್ಯಾದುದಾರರ ಸಂಘಕ್ಕೆ ಮಂಜೂರಾದ ಜಮೀನಿನ ದುರಸ್ಥಿ ಮಾಡಲು ಆದೇಶಕ್ಕಾಗಿ ದೂರಿನಲ್ಲಿ ಕೋರಿದ್ದು 2 ಎಕರೆಯಲ್ಲಿ ಹಾಲಿ 1 ಎಕರೆ ಸ್ಥಳ ಲಭ್ಯವಿದ್ದು 1 ಎಕರೆ ಜಾಗವನ್ನು ದುರಸ್ತಿಪಡಿಸಲು ಅವಕಾಶವಿರುತ್ತದೆ ಎಂದು 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ನಮೂದಿಸಿರುತ್ತಾರೆ.

14. ಪಿರ್ಯಾದುದಾರರ ಸಂಘದವರು ಮಂಜೂರಾದ 2 ವರ್ಷದ ಒಳಗಾಗಿ 2 ಎಕರೆಯಲ್ಲಿ ಕಟ್ಟಡ ನಿರ್ಮಿಸದೆ ಖಾಲಿ ಜಾಗ ಬಿಟ್ಟ ಕಾರಣ ಅಕ್ರಮವಾಗಿ ಮನೆ ಕಟ್ಟಿಕೊಳ್ಳಲು ದಾರಿಯಾಗಿರುತ್ತದೆ.

15. ಸೋಮವಾರಪೇಟೆ ತಾಲ್ಲೂಕು ಕುಶಾಲನಗರ ಹೋಬಳಿ ಹೆಬ್ಬಾಲೆ ಗ್ರಾಮದ ಸರ್ವೆ ನಂ. 17/12 ರ 2 ಎಕರೆ ಜಾಗವನ್ನು ಶ್ರೀ ಕಾಳಿಕಾಂಬ ವಿಶ್ವಕರ್ಮ ಕುಶಲ ಕೈಗಾರಿಕಾ ಸಹಕಾರಿ ಸಂಘದ ಕಟ್ಟಡ ಕಟ್ಟಲು ಜಮೀನು ಮಂಜೂರಾಗಿದ್ದು ಮೂಲ ಕಡತ ಕಛೇರಿಯಲ್ಲಿ ನಾಪತ್ತೆಯಾದ ಕಾರಣ ಗೈರು ವಿಲೆ ಕಡತ ತಯಾರಿಸಿ ಸ್ಥಳದಲ್ಲಿ ಬಾಕಿ ಉಳಿದ ಜಮೀನನ್ನು ಸಂಘದ ಸಾರ್ವಜನಿಕ ಉದ್ದೇಶಕ್ಕೆ ಬಳಸುವ ಸಲುವಾಗಿ ಅನುಕೂಲವಾಗುವಂತೆ ಸಂಬಂಧಪಟ್ಟವರಿಗೆ ಅವಕಾಶ ಕಲ್ಪಿಸಿ ದುರಸ್ತಿ ಮಾಡಿಸಿ ಕ್ರಮ ಜರುಗಿಸಲು ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

16. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ <u>ಒಂದು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

8/9/20

**[ನ್ಯಾಯಮೂರ್ತಿ ಬಿ.ಎಸ್. ಪಾಟೀಲ್]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**